**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ನಂ. 1/2021**

ಪಡುಬಿದ್ರಿ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

1. ಮೊಹಮ್ಮದ್ ಅಸ್ಗರ್,
ಪ್ರಾಯಃ 29 ವರ್ಷ,
ತಂದೆಃ ಅಬ್ದುಲ್ ಹಮೀದ್,
ವಾಸಃ ಮನೆ ನಂ.3-139-124 ತೌಫಿಕ್ ಮಂಝಿಲ್,
ಕೆಮ್ರಾಲ್ ಪೋಸ್ಟ್, ಪಕ್ಷಿಕೆರೆ, ಕೆಮ್ರಾಲ್ ಗ್ರಾಮ,
ಮಂಗಳೂರು ತಾಲೂಕು, ದಕ್ಷಿಣ ಕನ್ನಡ.

2. ಮೊಹಮ್ಮದ್ ಅರಿಶ್,
ಪ್ರಾಯಃ 25 ವರ್ಷ,
ತಂದೆಃ ಕೆ.ಎ. ಅಬ್ದುಲ್ಲಾ,
ವಾಸಃ ಮನೆ ನಂ.2-19-5, ಆಸ್ಮಾ ಮಂಝಿಲ್,
ಪದ್ಮನೂರು, ಕೆಮ್ರಾಲ್ ಪೋಸ್ಟ್,
ಕೆಮ್ರಾಲ್ ಗ್ರಾಮ, ಮಂಗಳೂರು ತಾಲೂಕು,
ದಕ್ಷಿಣ ಕನ್ನಡ.

3. ಮೊಹಮ್ಮದ್ ಶರೀಫ್,
ಪ್ರಾಯಃ 33 ವರ್ಷ,
ತಂದೆಃ ಸಯ್ಯದ್ ಅಲಿ,
ವಾಸಃ ಮನೆ ನಂ.3-147,ಪಕ್ಷಿಕೆರೆ,
ಕೆಮ್ರಾಲ್ ಪೋಸ್ಟ್, ಕೆಮ್ರಾಲ್ ಗ್ರಾಮ,
ಮಂಗಳೂರು ತಾಲೂಕು, ದಕ್ಷಿಣ ಕನ್ನಡ.

4. ಮೊಹಮ್ಮದ್ ಅರಿಫ್,
ಪ್ರಾಯಃ 36 ವರ್ಷ,
ತಂದೆಃ ಮೊಹಮ್ಮದ್,
ವಾಸಃ ತೌಫಿಕ್ ಮಂಝಿಲ್, ಹೊಸಕಾಡು,
ಪಕ್ಷಿಕೆರೆ, ಹಳೆಯಂಗಡಿ ಪೋಸ್ಟ್, ಕೆಮ್ರಾಲ್ ಗ್ರಾಮ,
ಮಂಗಳೂರು ತಾಲೂಕು,
ದಕ್ಷಿಣ ಕನ್ನಡ.

5. ಮುಫೀದ್ ಅಹಮ್ಮದ್,
ಪ್ರಾಯಃ 24 ವರ್ಷ,
ತಂದೆಃ ಅಬ್ದುಲ್ ಜಲೀಲ್,
ವಾಸಃ ಮನೆ ನಂ.2-24, ರಬಿಯಾ ಮಂಝಿಲ್,
ಮುಲ್ಲಟ್ಟು, ಪದ್ಮನೂರು, ಕೆಮ್ರಾಲ್ ಗ್ರಾಮ,
ಮಂಗಳೂರು ತಾಲೂಕು, ದಕ್ಷಿಣ ಕನ್ನಡ.

6. ಅಹಮ್ಮದ್ ಫಾರೂಕ್,
ಪ್ರಾಯಃ 42 ವರ್ಷ,
ತಂದೆಃ ಕೆ.ಎಂ. ಅಬ್ಬಾಸ್,
ವಾಸಃ ಅಂಬಿಕ ಸಾಮಿಲ್ ಹತ್ತಿರ,
ಕಾಪು ಪೋಸ್ಟ್, ಉಳಿಯಾರಗೋಳಿ ಗ್ರಾಮ,
ಕಾಪು ತಾಲೂಕು, ಉಡುಪಿ.

7. ಜೀವನ್,
ಪ್ರಾಯಃ 26 ವರ್ಷ,
ತಂದೆಃ ರಾಘವ,
ವಾಸಃ ಮಾತೃಶ್ರೀ ನಿವಾಸ, ಪುಂಡಾಡು ದರ್ಕಸ್,
ಎರ್ಮಾಳು ತೆಂಕ ಪೋಸ್ಟ್, ಎರ್ಮಾಳು ಗ್ರಾಮ,
ಕಾಪು ತಾಲೂಕು, ಉಡುಪಿ. ...... ಆರೋಪಿತರು

<u>ದೋಷಾರೋಪಣೆ</u>

**ಪಿ.ಆರ್. ಯೋಗೇಶ್**, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ, ಆದ ನಾನು ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 13.03.2019 ರಂದು ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 1 ನೇ ಆರೋಪಿಯವರಾದ ನೀವು ಸ.ನಂ.44 ರಲ್ಲಿ ಹರಿಯುವ ನೇತ್ರಾವತಿ ಹೊಳೆಯಿಂದ ಸುಮಾರು 9,880/- ರೂಪಾಯಿ ಮೌಲ್ಯದ 10 ಮೆಟ್ರಿಕ್ ಟನ್ ಮರಳನ್ನು ಕಳ್ಳತನ ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 379 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 1 ನೇ ಆರೋಪಿಯವರಾದ ನೀವು 2 ನೇ ಆರೋಪಿಯವರಿಗೆ ಮರಳನ್ನು ಸಾಗಿಸಲು ತಿಳಿಸಿದ್ದು, 2 ನೇ

ಆರೋಪಿಯವರಾದ ನೀವು KA-20-A-6963 ಸಂಖ್ಯೆಯ ಟಿಪ್ಪರ್ ನಲ್ಲಿ ಮರಳು ತುಂಬಿಕೊಂಡು ಹೋಗುವಾಗ ಕಾಪು ತಾಲೂಕು ಹೆಜಮಾಡಿ ಚೆಕ್ ಪೋಸ್ಟ್ ನಲ್ಲಿದ್ದ ತನಿಖಾಧಿಕಾರಿಗಳು ವಾಹನವನ್ನು ನಿಲ್ಲಿಸಿ ಪರವಾನಗಿಯನ್ನು ತೋರಿಸುವಂತೆ ಕೇಳಿದಾಗ KA-29, 9830 ಸಂಖ್ಯೆಯ ವಾಹನ ಟ್ರಿಪ್ ಶೀಟನ್ನು ತೋರಿಸಿ ಸರ್ಕಾರಕ್ಕೆ ಮೋಸ ಮಾಡುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 420 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 2 ನೇ ಆರೋಪಿಯವರು ಕರೆ ಮಾಡಿದ ಮೇರೆಗೆ ನೀವೆಲ್ಲರೂ ತಮ್ಮ ತಮ್ಮ ವಾಹನಗಳಲ್ಲಿ ಬಂದು ಅಕ್ರಮ ಕೂಟವನ್ನು ಸೇರಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 143 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ನೀವೆಲ್ಲರೂ ದೊಂಬಿ ಗಲಾಟೆಯನ್ನು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 147 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ನೀವೆಲ್ಲರೂ ಕರ್ತವ್ಯದ ಮೇಲಿದ್ದ ಚಾ.ಸಾ.1 ರಿಂದ 4 ಮತ್ತು 7 ರವರಿಗೆ ಬೇವರ್ಸಿಗಳು, ನಾಯಿಗಳು ಎಂದು ಅವಾಚ್ಯ ಶಬ್ದಗಳಿಂದ ಬೈದಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ನೀವೆಲ್ಲರೂ ಕರ್ತವ್ಯದ ಮೇಲಿದ್ದ ಚಾ.ಸಾ.1 ರಿಂದ 4 ಮತ್ತು 7 ರ ಸಾರ್ವಜನಿಕ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 353 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 7 ನೇ ಆರೋಪಿಯವರಾದ ನೀವು 2 ನೇ ಆರೋಪಿಯವರೊಂದಿಗೆ ಸೇರಿ ಅಕ್ರಮವಾಗಿ ಸಾಗಿಸುತ್ತಿದ್ದ ಮರಳನ್ನು ಖಾಲಿ ಮಾಡಿಸಿ ಸಾಕ್ಷ್ಯವನ್ನು ಹಾಳು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 201 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 2 ನೇ ಆರೋಪಿಯವರಾದ ನೀವು ಪರವಾನಗಿ ಇಲ್ಲದ ವಾಹನವನ್ನು ಮರಳು ಸಾಗಿಸಲು ಉಪಯೋಗಿಸುವ ಮೂಲಕ ಭಾರತ ಮೋಟಾರು ವಾಹನ ಕಾಯ್ದೆಯ ಕಲಂ 66 ಸಹ ಕಲಂ 192 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 14 ನೇ ದಿನ ಜುಲೈ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ನಂ. 1/2021**

ಪಡುಬಿದ್ರಿ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

7. ಜೀವನ್,
ಪ್ರಾಯಃ 26 ವರ್ಷ,
ತಂದೆಃ ರಾಘವ,
ವಾಸಃ ಮಾತೃಶ್ರೀ ನಿವಾಸ, ಪುಂಡಾಡು ದರ್ಕಸ್,
ಎರ್ಮಾಳು ತೆಂಕ ಪೋಸ್ಟ್, ಎರ್ಮಾಳು ಗ್ರಾಮ,
ಕಾಪು ತಾಲೂಕು, ಉಡುಪಿ. ...... ಆರೋಪಿ

<u>ದೋಷಾರೋಪಣೆ</u>

ಪ್ರಶ್ನೆ 1ಃ ಈಗ ನಿಮಗೆ ಓದಿ ವಿವರಿಸಿದ ದೋಷಾರೋಪಣೆಯು ತಿಳಿಯಿತೇ?

ಉತ್ತರಃ

ಪ್ರಶ್ನೆ 2 ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರ ಃ

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 14 ನೇ ದಿನ ಜುಲೈ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.